**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.627/2023**

**PW-4 CW-8**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಲ್ಲಿಕಾರ್ಜುನ ತಂದೆ ವೆಂಕಟರಾಯ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪೊಲೀಸ ಪೇದೆ |
| ವಾಸಸ್ಥಳ | : | ವಡಗೇರಾ |
| ಪ್ರಮಾಣಿಕರಿಸಿದ ದಿನಾಂಕ | : | 25-04-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು 2015 ರಿಂದ 2019 ರ ವರೆಗೆ ವಡಗೇರಾ ಪೊಲೀಸ ಠಾಣೆಯಲ್ಲಿ ಪೊಲೀಸ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16-09-2016 ರಂದು ನಾನು, ಚಾಸಾ-6 ಮತ್ತು 7 ರವರು ಠಾಣೆಯಲ್ಲಿದ್ದಾಗ ಚಾಸಾ-10 ರವರು ಯಾರೋ ಅಪರಿಚಿತರು ಗಾಡಿ ನಂ.ಕೆಎ-32-ಬಿ-2155 ಟಾಟಾ ಸುಮೋದಲ್ಲಿ ಕುರಿಗಳನ್ನು ಹಾಕಿಕೊಂಡು ಹತ್ತಿಗುಡೂರು ಕಡೆಯಿಂದ ಬರುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಇಬ್ಬರು ಪಂಚರನ್ನು ಕರೆದುಕೊಂಡು ಹೋಗೋಣ ಎಂದು ಹೇಳಿದ್ದು ನಾವೆಲ್ಲರೂ ಖಾನಾಪುರ ಕ್ರಾಸ್ ಹತ್ತಿರ ರೋಡಿನ ಮೇಲೆ ಬಂದು ನಿರೀಕ್ಷಿಸುತ್ತಿದ್ದಾಗ ಬೆಳಗ್ಗೆ 11-00 ಗಂಟೆಯ ಸುಮಾರಿಗೆ 2155 ಟಾಟಾ ಸುಮೋ ವಾಹನ ಹತ್ತಿಗುಡುರು ಕ್ರಾಸ್ ಕಡೆಯಿಂದ ಬಂದಿದ್ದು ವಾಹನ ನಿಲ್ಲಿಸಿ ಚಾಲಕನನ್ನು ವಾಹನದ ದಾಖಲೆ ನೀಡುವಂತೆ ಕೇಳಿದ್ದು ಸದರಿ ಚಾಲಕನು ವಾಹನದ ಕಡೆ ಹೋದಂತೆ ಮಾಡಿ ಓಡಿ ಹೋಗಿರುತ್ತಾನೆ, ಆಗ ವಾಹನ ಪರಿಶೀಲನೆ ಮಾಡಲು ಸದರಿ ವಾಹನದಲ್ಲಿ 14 ಕುರಿ ಮತ್ತು 04 ಟಗರುಗಳಿದ್ದು, ಸದರಿಯವುಗಳನ್ನು ಕಳ್ಳತನ ಮಾಡಿಕೊಂಡಿರಬಹುದು ಎಂದು ಅವುಗಳನ್ನು ಜಪ್ತಿಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಬಂದು ಠಾಣಾ ಗುನ್ನಾ ನಂಬರ 99/2016 ರಲ್ಲಿ ಪ್ರಕರಣ ದಾಖಲಿಸಿದ್ದು ದಿನಾಂಕ 29-10-2016 ರಂದು ಸಿಪಿಐ ದೇವದುರ್ಗ ರವರು ಇವರನ್ನು ವಡಗೇರಾ ಪೊಲೀಸ ಠಾಣೆಗೆ ಕರೆದುಕೊಂಡು ಬಂದಿದ್ದು ಸದರಿ ವ್ಯಕ್ತಿಯನ್ನು ನಾನು ನೋಡಿ ಗುರುತಿಸಿದ್ದು ಸದರಿ ವ್ಯಕ್ತಿಯ ಆ ದಿನ ಗಾಡಿಯನ್ನು ನಡೆಸಿಕೊಂಡ ಬಂದ ವ್ಯಕ್ತಿ ಆಗಿದ್ದನು, ಆತನ ರಮೇಶ ತಂದೆ ರಾಮಣ್ಣ ಅಂತಾ ತಿಳಿದು ಬಂದಿರುತ್ತದೆ. ಸದರಿ ಆರೋಪಿ ಮತ್ತು ಇತರೆ ಮೂವರು ಸೇರಿ ಮುಷ್ಟೂರು ಕ್ರಾಸ್ ಹತ್ತಿರ ಹಾಕಿದ್ದ ಶೆಡ್ಡಿನಲ್ಲಿಂದ ಮೇಲಿನ ಕುರಿಗಳನ್ನು ಟಾಟಾ ಸುಮೋ ನಂಬರ 2155 ನೇದ್ದರಲ್ಲಿ ಹಾಕಿಕೊಂಡು ಕಳ್ಳತನ ಮಾಡಿಕೊಂಡು ಹೋಗಿದ್ದರೆಂದು ಗೊತ್ತಾಗಿರುತ್ತದೆ. ಆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಡಿ.ಸಿ ವಕೀಲರಿಂದ.**

ಖಾನಾಪುರ ಕ್ರಾಸ್ ನ ಮೂಲಕ ಹತ್ತಿಗೂಡುರು ಕಡೆಯಿಂದ ವಾಹನಗಳು ಯಾದಗಿರಿಗೆ ಹೋಗುತ್ತವೆ ಎಂದರೆ ಸರಿ. ಶಹಾಪುರದಿಂದ ಯಾದಗಿರಿಗೆ ಹೋಗಬೇಕಾದರೆ ಖಾನಾಪುರ ಕ್ರಾಸ್ ಬರುತ್ತದೆ ಎಂದರೆ ಸರಿ. ಸದರಿ ಶಹಾಪುರ ಕ್ರಾಸ್ ಹತ್ತಿರ ಸಾಕಷ್ಟು ವಾಹನಗಳ ಸಂಚಾರ ಇರುತ್ತದೆ ಎಂದರೆ ಸಾಮಾನ್ಯವಾಗಿ ವಾಹನಗಳ ಸಂಚಾರ ಇರುತ್ತದೆ. ಸದರಿ ಖಾನಾಪುರ ಕ್ರಾಸನಿಂದ ಸುರುಪುರ ರಸ್ತೆ ಎಷ್ಟು ಅಡಿ ಅಂತರದಲ್ಲಿದೆ ಎಂದರೆ ಸಾಕ್ಷಿ ಅಂದಾಜು 10-15 ಮೀಟರ್ ಅಂತರದಲ್ಲಿದೆ ಎಂದು ನುಡಿಯುತ್ತಾರೆ. ನಾವು ಹೋಗಿರುವ ವಾಹನ ಪಶ್ಚಿಮ ಭಾಗದ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿರುತ್ತೇವೆ. ಸದರಿ ಟಾಟಾ ಸುಮೋ ವಾಹನ ಓಪನ್ ಆಗಿತ್ತೆ ಅಥವಾ ಕ್ಲೋಸ್ ಇತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ಗ್ಲಾಸ್ ನಿಂದ ಕೂಡಿದ ಬಾಗಿಲುಗಳನ್ನು ಹೊಂದಿದ ವಾಹನ ಆಗಿತ್ತು. ಸದರಿ ವಾಹನಕ್ಕೆ ಹಳದಿ ಬೋರ್ಡ ಅಳವಡಿಸಲಾಗಿತ್ತು. ಸದರಿ ಓಡಿ ಹೋದ ವ್ಯಕ್ತಿಯೊಂದಿಗೆ ವಾಹನದಲ್ಲಿ ಇನ್ನೂ 2-3 ಜನರು ಇದ್ದರು ಅವರನ್ನು ನಾನು ನೋಡಿರುವುದಿಲ್ಲ. ಟಾಟಾ ಸುಮೋ ವಾಹನ ಅಂದಾಜು 8-10 ಜನರು ಪ್ರಯಾಣಿಸುವ ವಾಹನ ಆಗಿತ್ತು. ಟಾಟಾ ಸುಮೋದ ಹಿಂದಿನ ಭಾಗದಲ್ಲಿ ಎಷ್ಟು ಕುರಿ ಮತ್ತು ಟಗರನ್ನು ಹಾಕಲಾಗಿತ್ತು ಹಾಗೂ ಮಧ್ಯ ಭಾಗದಲ್ಲಿ ಎಷ್ಟು ಕುರಿ ಮತ್ತು ಟಗರನ್ನು ಹಾಕಲಾಗಿತ್ತು ಎಂದು ನನಗೆ ಪ್ರತ್ಯೇಕವಾಗಿ ಹೇಳಲಾಗುವುದಿಲ್ಲ. ಕೆಂಪು ಬಣ್ಣದ ಕುರಿಗಳು ಇದ್ದವು. ಚಾಲಕನು ಓಡಿ ಹೋಗುವಾಗ ಆತನನ್ನು ಹಿಡಿಯಲು ಪ್ರಯತ್ನಿಸಿದ್ದು ಆತನು ಸಿಕ್ಕಿರುವುದಿಲ್ಲ. ಖಾನಾಪುರ ಕ್ರಾಸ್ ಹತ್ತಿರ ಎಎಸ್ಐ ವಡಗೇರಾ ಇವರಿಗೆ ಮತ್ತು ವಡಗೇರಾ ಠಾಣೆಯಲ್ಲಿ ಸಿಪಿಐ ದೇವದುರ್ಗ ಇವರಿಗೆ ಹೇಳಿಕೆಗಳನ್ನು ನೀಡಿರುತ್ತೇನೆ. ಸಿಪಿಐ ದೇವದುರ್ಗ ರವರು ಆರೋಪಿಯನ್ನು ವಡಗೇರಾ ಠಾಣೆಗೆ ಹಿಡಿದುಕೊಂಡ ಬಂದ ನಂತರ ನಾನು ಆರೋಪಿಯನ್ನು ಗುರುತಿಸಿರುತ್ತೇನೆ. ನಾನು ಆರೋಪಿಯನ್ನು ನೋಡಿರುತ್ತೇನೆ ಮತ್ತು ಇತರೆ 2-3 ಜನರು ಓಡಿ ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.